C.R.P.67

Form No.4 (Civil)
Deposition Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆ: 67/2024**

**ಪ್ರಾಸಾ. 2 ಚಾಸಾ. 1**

| | |
|---|---|
| **ಸಾಕ್ಷಿದಾರರ ಹೆಸರು** | ದುರ್ಗ ಆರ್ |
| **ಗಂಡನ ಹೆಸರು** | ಲಕ್ಷ್ಮೀಕಾಂತ |
| **ವಯಸ್ಸು** | 41 ವರ್ಷಗಳು |
| **ಉದ್ಯೋಗ** | ಪೊಲೀಸ್ ಇನ್ಸ್ ಪೆಕ್ಟರ್, ವಿಜಯ ಸಂಚಾರ ಪೊಲೀಸ್ ಠಾಣೆ. |
| **ವಾಸ** | ಬೆಂಗಳೂರು. |

**ಪ್ರಮಾಣ ವಚನ ಬೋಧಿಸಿದ ದಿನಾಂಕ: 11.11.2025**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ಮೇ **2022** ರಿಂದ ಆಗಸ್ಟ್ **2023** ರವರೆಗೆ ಸಿಸಿಬಿಯಲ್ಲಿ ಮಹಿಳಾ ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 10.04.2023 ರಂದು ನಾನು ಸಿಸಿಬಿ ಕೇಂದ್ರ ಕಛೇರಿಯಲ್ಲಿದ್ದಾಗ ಸುಮಾರು ಬೆಳಗಿನ 12.30 ಗಂಟೆ ಸಮಯದಲ್ಲಿ ಬಾತ್ಮಿದಾರರ ಮುಖಾಂತರ ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಏಂಜಲ್ ಯೂನಿಸೆಕ್ಸ್ ಸ್ಪಾ ಆ್ಯಂಡ್ ಸಲೂನ್ ನಲ್ಲಿ ಅಕ್ರಮವಾಗಿ ಹುಡುಗಿಯರನ್ನು ನೇಮಿಸಿಕೊಂಡು, ಬಾಡಿ ಟು ಬಾಡಿ ಮಸಾಜ್, ಹ್ಯಾಪಿ ಎಂಡಿಂಗ್, ಫುಲ್ ಸರ್ವೀಸ್‌ನಂತಹ ಸೇವೆಗಳನ್ನು ನೀಡಿ, ಅಕ್ರಮ ಚಟುವಟಿಕೆಯಲ್ಲಿ ಭಾಗವಹಿಸುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಆ ಕಾರಣ ಸುಮಾರು

1.00 ಗಂಟೆ ಸಮಯಕ್ಕೆ ಚಾಸಾ-4 ಮತ್ತು 5 ಪಂಚರನ್ನು ಕಛೇರಿಗೆ ಕರೆಯಿಸಿ, ಅವರಿಗೆ ನೋಟಿಸ್ ನೀಡಿ, ಪ್ರಕರಣದ ಬಗ್ಗೆ ಮಾಹಿತಿ ನೀಡಿ, ಅವರನ್ನು ಪಂಚರಾಗಿ ಸಹಕರಿಸಲು ಕೋರಿ, ಅವರು ಒಪ್ಪಿ ರುತ್ತಾರೆ. ತಮ್ಮ ರುಜುಗಳನ್ನು ಮಾಡಿರುತ್ತಾರೆ. ಸಾಕ್ಷಿ ನೋಟಿಸ್ ನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-2(ಎ) ಎಂದು ಗುರುತಿಸಲಾಯಿತು.

3. ಆ ನಂತರ ಹಿರಿಯ ಅಧಿಕಾರಿಗಳಾದ ಎಸಿಪಿರವರಿಗೆ ಬಾತ್ಮಿ ಬಗ್ಗೆ ತಿಳಿಸಿ, ಸ ವಾರೆಂಟ್ ಪಡೆಯಲು ಸಮಯಾವಕಾಶ ಕಡಿಮೆ ಇದ್ದ ಕಾರಣ ರೆಕಾರ್ಡ್ ಆಫ್ ರಿಸನ್ಸ್ ಪಡೆದುಕೊಂಡು, ಪಂಚರ ರುಜು ಪಡೆದುಕೊಂಡು, ಮುಂದಿನ ತನಿಖೆಗೆ ಅನುಮತಿ ಕೋರಿರುತ್ತೇನೆ. ಸಾಕ್ಷಿ ರೆಕಾರ್ಡ್ ಆಫ್ ರಿಸನ್ಸ್ ನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು. ನಂತರ ಪಂಚರೊಂದಿಗೆ ಹಾಗೂ ಸಿಬ್ಬಂದಿಗಳಾದ ಚಾಸಾ-6 ರಿಂದ 10 ರವರೊಂದಿಗೆ ಬಾತ್ಮಿ ಬಂದ ಸ್ಥಳಕ್ಕೆ ಇಲಾಖಾ ವಾಹನದಲ್ಲಿ ತೆರಳಿ, ಬಾತ್ಮಿ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಢಿಕಾಯಿ ಸಾಕ್ಷಿಯಾಗಿ ಅಭಿ ಎನ್ನುವ ಯುವಕನಿಗೆ ಈ ಪ್ರಕರಣದ ಬಗ್ಗೆ ವಿಷಯ ತಿಳಿಸಿ, ಸದರಿ ಸ್ಪಾಗೆ ಭೇಟಿ ನೀಡಿ ಅಲ್ಲಿ ಅಕ್ರಮ ಚಟುವಟಿಕೆ ನಡೆಯುತ್ತಿರುವುದು ಕಂಡು ಬಂದಲ್ಲಿ ಮಿಸ್ ಕಾಲ್ ಮುಖಾಂತರ ತಿಳಿಸಲು ಸೂಚಿಸಿ, ಆತನಿಗೆ 500 ರೂ ಮುಖಬೆಲೆಯ ಮೂರು ಕರೆನ್ಸಿ ನೋಟುಗಳನ್ನು ನೀಡಿ ಕಳುಹಿಸಲಾಗಿರುತ್ತದೆ. ಆತ ಸದರಿ ಸ್ಪಾಗೆ ಭೇಟಿ ನೀಡಿದ 10 ನಿಮಿಷಗಳಲ್ಲಿ ನಮಗೆ ಮಿಸ್‌ಕಾಲ್ ನೀಡಿರುತ್ತಾನೆ. ನಂತರ ಮಧ್ಯಾಹ್ನ 3.20 ಗಂಟೆ ಸಮಯಕ್ಕೆ ನಾನು ಸದರಿ ಸ್ಪಾ ಮೇಲೆ ದಾಳಿ ಮಾಡಿರುತ್ತೇವೆ. ಸದರಿ ಸ್ಪಾ ಕಟ್ಟಡದ ಎರಡನೇ ಮಾಳಿಗೆಯಲ್ಲಿ ಇದ್ದು, ನಾವು ದಾಳಿ ಮಾಡಿದಾಗ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿತಳು ಸದರಿ ಸ್ಪಾ ದ ಸ್ವಾಗತಿಕಾರಿಣಿ ಆಗಿ ಕೆಲಸ ಮಾಡುತ್ತಿದ್ದಳು. ಆಕೆಯನ್ನು ಸ್ಪಾ ಚಟುವಟಿಕೆಗಳ ಬಗ್ಗೆ, ಅದರ ರಹದಾರಿಯ ಬಗ್ಗೆ, ತಿಳಿದು ಬಂದ ಬಾತ್ಮಿ ವಿಷಯದ ಬಗ್ಗೆ ಕೇಳಲಾಗಿ, ಆಕೆ ಸದರಿ ಸ್ಪಾ ದ ಮಾಲೀಕರು ಒಬ್ಬರು ಕಿರಣ್ ಎಂಬುವುದಾಗಿ ತಿಳಿಸಿರುತ್ತಾರೆ. ಸದರಿ ಕಿರಣ್ ಈ ಪ್ರಕರಣದ 1 ನೇ ಆರೋಪಿತನಾಗಿರುತ್ತಾನೆ. ಈ ರೀತಿ ತಿಳಿಸಿದ ನಂತರ 2 ನೇ ಆರೋಪಿತಳು

ಸ್ಪಾ ನಲ್ಲಿ ಬಳಸುತ್ತಿದ್ದ ರೆಡ್ ಮೀ ಬ್ಲ್ಯೂ ಕಲರ್ ಮೊಬೈಲ್ ನ್ನು ನೀಡಿದ್ದು, ಅದರ ಸಿಮ್ ಕಾರ್ಡ್ ಸಂಖ್ಯೆ 7760696579 ಆಗಿರುತ್ತದೆ. 2 ನೇ ಆರೋಪಿತಳು ಸದರಿ ಸಿಮ್ ಸಂಖ್ಯೆ ಹಾಗೂ ಮೊಬೈಲ್ ಮುಖಾಂತರ ಗಿರಾಕಿಗಳನ್ನು ಸ್ಪಾ ಗೆ ಕರೆಸಿಕೊಳ್ಳಲು ಬಳಸುತ್ತಿದ್ದುದಾಗಿ ತಿಳಿಸಿರುತ್ತಾಳೆ ಹಾಗೂ 1 ನೇ ಆರೋಪಿ ಕಿರಣ್ ಸಹ ಗಿರಾಕಿಗಳನ್ನು ಸ್ವತಃ ಕಳುಹಿಸುತ್ತಿದ್ದ ಬಗ್ಗೆ ತಿಳಿಸಿರುತ್ತಾಳೆ. ರಹದಾರಿಯನ್ನು ಸದರಿ ಸ್ಪಾವನ್ನು ನಡೆಸಲು ಹೊಂದಿಲ್ಲದಿರುವುದಾಗಿ ತಿಳಿಸಿರುತ್ತಾಳೆ. ಸ್ಪಾ ನಲ್ಲಿ ಕಂಡು ಬಂದ ಸಂತ್ರಸ್ಥ ಮಹಿಳೆಯರು ಸದರಿ ಸ್ಪಾ ಚಟುವಟಿಕೆಗಳನ್ನು ನಿರ್ವಹಿಸಲು ಸೂಕ್ತ ತರಬೇತಿಯನ್ನು, ದೃಢೀಕರಣ ಪತ್ರವನ್ನು ಹೊಂದಿಲ್ಲದವರಾಗಿರುತ್ತಾರೆ. ಅಕ್ರಮವಾಗಿ ಸದರಿ ಸಂತ್ರಸ್ಥ ಮಹಿಳೆಯರನ್ನು ಸ್ಪಾ ಹೆಸರಿನಲ್ಲಿ ಬೇರೆ ಅಕ್ರಮ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವುದು ಕಂಡು ಬಂದಿರುತ್ತದೆ.

4. ನಂತರ ರಿಸಪ್ಷನ್ ಕೌಂಟರ್ ನ್ನು ಪರಿಶೀಲಿಸಿದಾಗ ನಾವು ಢಿಕಾಯಿ ಸಾಕ್ಷಿ ಅಭಿ ಎಂಬ ಯುವಕನಿಗೆ ನೀಡಿದ್ದ 500 ರೂ ಮುಖಬೆಲೆ ಮೂರು ಕರೆನ್ಸಿ ನೋಟುಗಳು ಸೇರಿದಂತೆ ಒಟ್ಟು ರೂ.3,000/- ಕಂಡು ಬಂದಿರುತ್ತದೆ. ಆ ಪೈಕಿ ನಾವು ಢಿಕಾಯಿ ಸಾಕ್ಷಿಗೆ ನೀಡಿದ್ದ ರೂ. 1,500/- ರೂಪಾಯಿಗಳನ್ನು ತೆಗೆದುಕೊಂಡಿರುತ್ತೇವೆ. ಉಳಿದ ರೂ.1,500/- ಗಳನ್ನು ಹಾಗೂ ಬ್ಲ್ಯೂ ಕಲರ್ ರೆಡ್ ಮಿ ಮೊಬೈಲ್ ನ್ನು ಸಿಮ್ ಕಾರ್ಡ್ ನೊಂದಿಗೆ ನಮ್ಮ ಸುಪರ್ದಿಗೆ ತೆಗೆದುಕೊಂಡಿರುತ್ತೇವೆ. ನಂತರ ಸ್ಪಾ ಗತಕಾರಿಣಿ 2 ನೇ ಆರೋಪಿತಳೊಂದಿಗೆ ಸ್ಪಾ ನಡೆಸುತ್ತಿದ್ದ ಸ್ಥಳವನ್ನು ಅಜಮಾಯಿಸಿ ನೋಡಲಾಗಿ ಸ್ಥಳದಲ್ಲಿ ಬಾತ್ ರೂಮ್ ಅಟ್ಯಾಚ್ ಆಗಿರುವ ಒಂದು ಕೊಠಡಿಯು ಕಂಡು ಬಂದಿದ್ದು, ಸದರಿ ಕೊಠಡಿಯಲ್ಲಿ ನಾವು ಕಳುಹಿಸಿದ್ದ ಢಿಕಾಯಿ ಸಾಕ್ಷಿ ಯುವಕ ಹಾಗೂ ಒಬ್ಬ ಗೌರಿ ಎಂಬ ಹೆಸರಿನ ಮಹಿಳೆ ಇಬ್ಬರು ಅರೆಬೆತ್ತಲಾಗಿ ಕಂಡು ಬಂದಿದ್ದು, ಸದರಿ ಸಂತ್ರಸ್ಥ ಮಹಿಳೆಯನ್ನು ವಿಚಾರಿಸಲಾಗಿ ಆಕೆ ತಾನು ಬಡವಳಿದ್ದು, 1 ಮತ್ತು 2 ನೇ ಆರೋಪಿತರು ಹಣದ ಆಮೀಷ ಮಾಡಿದ್ದು, ತಾನು ಆ ರೀತಿಯ ಸೇವೆಗಳನ್ನು ಸ್ಪಾನಲ್ಲಿ ಹಣಕ್ಕಾಗಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾಳೆ. ಅಲ್ಲಿ ಕೊಠಡಿಯನ್ನು ಅಜಮಾಯಿಸಿ ನೋಡಲಾಗಿ ಒಂದು ಬಳಸಿದ ಕಾಮ ಸೂತ್ರ ಕಂಪನಿಯ ಕಾಂಡೋಮ್ ಅದರ ಕವರ್ ನೊಂದಿಗೆ ಹಾಗೂ ಮತ್ತೊಂದು ಬಳಸದೆ ಇರುವ ಸದರಿ

ಕಂಪನಿಯ ಕಾಂಡೋಮ್ ಕಂಡು ಬಂದಿದ್ದು, ಅವುಗಳನ್ನು ಸಹ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿರುತ್ತದೆ. ನಂತರ ಅಲ್ಲಿ ಮತ್ತೊಂದು ಕೊಠಡಿ ಕಂಡು ಬಂದಿದ್ದು, ಸದರಿ ಕೊಠಡಿಯಲ್ಲಿ ಪರಿಶೀಲಿಸಲಾಗಿ, ಒಬ್ಬ ಯುವಕ ಮತ್ತು ಯುವತಿ ಅರೆಬೆತ್ತಲಾಗಿ ಕಂಡು ಬಂದಿದ್ದು, ಅವರನ್ನು ವಿಚಾರಿಸಲಾಗಿ ಅವರು ತಮ್ಮ ಹೆಸರನ್ನು ಹರೀಶ್ ಮತ್ತು ಕುಮಾರಿ ಎಂಬುವುದಾಗಿ ತಿಳಿಸಿರುತ್ತಾರೆ. ಸದರಿ ಸಂತ್ರಸ್ಥ ಮಹಿಳೆ ಕುಮಾರಿಯನ್ನು ವಿಚಾರಿಸಲಾಗಿ ಆಕೆ ತಾನು ಬಡವಳಿದ್ದು, 1 ಮತ್ತು 2 ನೇ ಆರೋಪಿತರು ಹಣದ ಆಮೀಷ ಮಾಡಿದ್ದು, ತಾನು ಆ ರೀತಿಯ ಸೇವೆಗಳನ್ನು ಸ್ಪಾನಲ್ಲಿ ಹಣಕ್ಕಾಗಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾಳೆ.

5. ನಂತರ ನಮ್ಮ ಸಿಬ್ಬಂದಿ ಮುಖಾಂತರ ನಾವು ತೆಗೆದುಕೊಂಡು ಹೋಗಿದ್ದ ಲ್ಯಾಪ್‌ಟಾಪ್ ನಲ್ಲಿ ಸ್ಥಳದಲ್ಲಿ ಪಂಚನಾಮೆಯನ್ನು ಸಿದ್ಧಪಡಿಸಿ, ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಮಹಜರ್ ನಡುವಳಿಕೆಗಳನ್ನು ನಡೆಸಿ, ಪಂಚರ ರುಜುಗಳನ್ನು ಹಾಗೂ ಸಿಬ್ಬಂದಿಯವರ ರುಜುಗಳನ್ನು ಪಡೆದುಕೊಳ್ಳಲಾಗಿರುತ್ತದೆ. ವಶಪಡಿಸಿಕೊಂಡ ಮೊಬೈಲ್, ಹಣ, ಕಾಂಡೋಮ್ ಪ್ಯಾಕೇಟ್ ಗಳಿಗೆ ಸಂಬಂಧಿಸಿದಂತೆ ಎನವಲಪ್ ಕವರ್ ಗಳಿಗೆ ಹಾಕಿ, ಅವುಗಳನ್ನು ಸೀಲ್, ಸಹಿ ಮಾಡಲಾಗಿರುತ್ತದೆ. ಸಾಕ್ಷಿ ಮಹಜರ್ ನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-4(ಎ) ಎಂದು ಗುರುತಿಸಲಾಯಿತು.

6. ನಂತರ ಈ ನಡುವಳಿಕೆಗಳ ಬಗ್ಗೆ ಸ್ವತರ್ಪಿ ವರದಿಯನ್ನು ಸ್ಥಳದಲ್ಲಿಯೇ ಲ್ಯಾಪ್‌ಟಾಪ್ ಮುಖಾಂತರ ಸಿದ್ಧಪಡಿಸಿರುತ್ತೇನೆ. 1 ನೇ ಆರೋಪಿ ಸ್ಥಳದಲ್ಲಿ ಕಂಡು ಬಂದಿರುವುದಿಲ್ಲ. 2 ನೇ ಆರೋಪಿಯನ್ನು ವಶಕ್ಕೆ ಪಡೆದು, ಗಿರಾಕಿಯಾ ಹರೀಶ್ ಹಾಗೂ ಇಬ್ಬರು ಸಂತ್ರಸ್ಥ ಮಹಿಳೆಯರೊಂದಿಗೆ ಬ್ಯಾಡರಹಳ್ಳಿಯ ಪೊಲೀಸ್ ಠಾಣೆಯ ಠಾಣಾಧಿಕಾರಿಗಳ ಸಮಕ್ಷಮ ವರದಿಯೊಂದಿಗೆ ಹಾಗೂ ವಶಪಡಿಸಿಕೊಂಡ ವಸ್ತುಗಳೊಂದಿಗೆ ಹಾಜರುಪಡಿಸಿರುತ್ತೇನೆ. ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವರದಿಯನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ-5 ಎಂದು ಸಾಕ್ಷಿಯ ಸಹಿಯನ್ನು

ನಿಶಾನೆ ಪಿ-5(ಎ) ಎಂದು ಗುರುತಿಸಲಾಯಿತು. ನಾನು ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ರೂ.500/- ಮುಖಬೆಲೆಯ ಮೂರು ನೋಟುಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ಮುದ್ದೆಮಾಲು-1 ಎಂದು ಗುರುತಿಸಲಾಯಿತು. ರೆಡ್ ಮೀ ಕಂಪನಿಯ ಮೊಬೈಲ್ ಸಿಮ್ ಕಾರ್ಡ್ ನೊಂದಿಗೆ ಗುರುತಿಸಿದ್ದು ಅದನ್ನು ಮುದ್ದೆಮಾಲು-2 ಎಂದು ಗುರುತಿಸಲಾಯಿತು. ಬಳಸದೇ ಇರುವ ಕಾಮಸೂತ್ರ ಕಂಪನಿಯ ಕಾಂಡೋಮ್ ಪ್ಯಾಕೇಟ್ ನ್ನು ಮುದ್ದೆಮಾಲು-3 ಎಂದು, ಬಳಸಲ್ಪಟ್ಟಿರುವ ಕಾಮಸೂತ್ರ ಕಂಪನಿಯ ಕಾಂಡೋಮ್ ಪ್ಯಾಕೇಟ್ ನ್ನು ಮುದ್ದೆಮಾಲು-4 ಎಂದು ಗುರುತಿಸಲಾಯಿತು. (ಸದರಿ ವಸ್ತುಗಳನ್ನು ಪ್ರತ್ಯೇಕವಾದ ಎನವಲಪ್ ಕವರ್‌ನಲ್ಲಿ ಸೀಲು ಮಾಡಿದ್ದು, ಅವುಗಳನ್ನು ಸರ್ಕಾರಿ ಅಭಿಯೋಜಕರ ಮನವಿ ಮೇರೆಗೆ, ಸೀಲ್ ನ್ನು ಒಡೆದು ಸಾಕ್ಷಿಗೆ ತೋರಿಸಿ ನಂತರ ಮುದ್ದೆಮಾಲಾಗಿ ಗುರುತಿಸಲಾಯಿತು.) ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ 2 ನೇ ಆರೋಪಿಯನ್ನು ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀ ಎ.ಕೆ. ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿಃ**

ಆರೋಪಿತರ ಪರ ವಕೀಲರು ಪಾಟೀ-ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಪಾಟೀ-ಸವಾಲನ್ನು ಮುಂದೂಡಲಾಯಿತು.

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.